ಮಲ್ಲಿಕಾರ್ಜುನ, ಸುರಧೇನುಪುರ

ಇಂದಿನವರು ಜಾಣತನಕ್ಕಿಂತ ಜಾಲತಾಣಕ್ಕೆ ಹೆಚ್ಚು ಒತ್ತು ನೀಡುತ್ತಿರುವುದು ಸರಿಯೆ?



ಒತ್ತು ನೀಡುತ್ತಿರುವುದು ಸರಿ; ಹೊತ್ತು ನೀಡುತ್ತಿರುವುದು ಸರಿಯಲ್ಲ.

ಪಿ. ಜಯವಂತ ಪೈ, ಕುಂದಾಪುರ

ಪ್ರೀತಿಸಿ ಮದುವೆಯಾಗುವುದು ಒಳ್ಳೆಯದೋ, ಮದುವೆಯಾಗಿ ಪ್ರೀತಿಸುವುದು ಒಳ್ಳೆಯದೋ?

ಎರಡನೆಯದೇ ವಾಸಿ; ಮೊದಲನೆಯದು ಕ್ವಿನೈನಿನಂತೆ; ಕಹಿ ತಿಳಿಯುವುದು ಸೇವಿಸಿದ ಮೇಲೇ.

ಪಿ. ಚಿದಾನಂದ, ಜವನಗೊಂಡನಹಳ್ಳಿ

ಶಾಸಕರ, ಮಂತ್ರಿಗಳ, ರಾಜಕಾರಣಿಗಳ ಆಸ್ತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುವುದಲ್ಲ?

ವರ್ಷದಿಂದ ವರ್ಷಕ್ಕೆ ಮತದಾರನ ಬೇಡಿಕೆಗಳೂ ಏರುತ್ತಿವೆಯಂತಲ್ಲ!

ಬೂಕನಕೆರೆ ವಿಜೇಂದ್ರ, ಮೈಸೂರು

ಹೆಚ್ಚು ಜಗಳವಾಡುವ ದಂಪತಿಗಳೇ ಹೆಚ್ಚು ವರ್ಷ ಬದುಕುತ್ತಾರಂತೆ?



‘ಅವನು(ಳು) ಸತ್ಮೇಲೇ ನನಗೆ ನೆಮ್ಮದಿ’ ಎಂದು ಆ ದಿನವನ್ನು ಎದುರು ನೋಡುತ್ತಿರುತ್ತಾರಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ರಾಜ್ಯ ಸಾರಿಗೆ ಬಸ್ಸಿನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಆದಾಗಿನಿಂದ ಸೀರೆಗಳ ಬೆಲೆ ಏರಿದೆಯಂತೆ?

ಸರಿಯೇ. ಒಂದು ತಲೆಗೆ ಚೌರಿ ಒದಗಿಸಲು ಮತ್ತೊಂದು ತಲೆ ಬೋಳಾಗಬೇಕಲ್ಲ.

ಸುಧೀಂದ್ರ, ಬೆಂಗಳೂರು

ಕೆಲವರನ್ನು ಮಾತಿಗೆಳೆದರೆ ‘ನೀವ್ ಹೇಳ್ತಾಯಿರ್ಬೇಕು, ನಾವ್ ಕೇಳ್ತಾಯಿರ್ಬೇಕು’ ಅಂತಾರಲ್ಲ...?

ಅವರನ್ನು ನಿಲ್ಲಿಸಿ ಗೆಲ್ಲಿಸಿ ವಿಧಾನಸೌಧಕ್ಕೆ ಕಳುಹಿಸಿ. ಅಲ್ಲಿ ಸ್ಯಾಂಪಲ್‌ಗೂ ಇಂತಹವರಿಲ್ಲ.

ಕೆ.ಎಸ್. ಸೋಮೇಶ್ವರ, ಬೆಂಗಳೂರು

ನಮ್ಮಲ್ಲಿ ಹೆಣ್ಣು ದೇವರುಗಳನ್ನೂ ಶ್ರೀ ಅಂತಲೇ ಸಂಬೋಧಿಸುತ್ತಾರೆ. ಏಕೆ?

ಪೌರುಷದಲ್ಲಿ ಪುರುಷರನ್ನೂ ಮೀರಿಸಿರುವ ನಿದರ್ಶನಗಳಿರುವುದರಿಂದ.

ಎಚ್.ಕೆ. ವಿಜಯಕುಮಾರ್, ರಾಯಚೂರು

ಎಲ್ಲಾ ಅಭ್ಯರ್ಥಿಗಳು ಲೂಟಿಕೋರರೇ ಆಗಿದ್ದಲ್ಲಿ ಚುನಾವಣೆಯಲ್ಲಿ ಯಾರಿಗೆ ಮತ ಹಾಕಲಿ?

ಕಡಿಮೆ ಆಮಿಷ ತೋರಿಸಿದವನಿಗೆ. ಹೆಚ್ಚು ಕೊಟ್ಟವರು ಹೆಚ್ಚು ಕದಿಯುವರು.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ಅತ್ತೆ ಸೊಸೆ ಜಗಳ ಆಡುವಂತೆ ಮಾವ ಅಳಿಯ ಜಗಳ ಆಡುವುದಿಲ್ಲವಲ್ಲ?

ಆಗುವುದಿಲ್ಲ. ತಮ್ಮತಮ್ಮ ಸತಿಯರೊಡನೆಯ ಕಾಳಗದಲ್ಲೇ ನೆಲ ಕಚ್ಚಿಬಿಟ್ಟಿರುತ್ತಾರೆ.

ಅಮರಯ್ಯಾ ಪತ್ರಿಮಠ, ಸುರಪುರ

ವೃತ್ತಿಗೂ ಪ್ರವೃತ್ತಿಗೂ ಅಂತರವೇನು?

ವೃತ್ತಿ ನಿಶ್ಚಿತ ಪಥದಲ್ಲಿ ಸಾಗುವ ರೇಸ್ ಕುದುರೆ; ಪ್ರವೃತ್ತಿ ಹುಚ್ಚುಕುದುರೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಮದುವೆಯ ನಂತರ ಗಂಡು ಮೌನಕ್ಕೇ ಶರಣಾಗುವನಲ್ಲ...?

ಹಾಗೇನಿಲ್ಲ; ಗುಡುಗಿನ ಮುಂದೆ ಗೊಣಗು ಕೇಳಿಸದು ಅಷ್ಟೇ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಹೇರ್ ಕಟಿಂಗ್ ಸಲೂನ್‌ಗಳನ್ನು ಮಂಗಳವಾರದಂದು ಮುಚ್ಚಿರಲು ಕಾರಣ?

ಮಂಗಳವಾದ ದಿನದಂದು ಕೊಳಕರಿಂದ ದೂರವಿರುವ ಇಚ್ಛೆಯಂತೆ.

ಬಿ. ಚಂದ್ರೇಗೌಡ, ಬೆಂಗಳೂರು

ಬಾಲಕನಿಗೂ, ಹಿಂಬಾಲಕನಿಗೂ ಏನು ವ್ಯತ್ಯಾಸ?

ಸುಮಾರು 12 ವರ್ಷಗಳು; ಆರರಲ್ಲಿ ಬಾಲಕ; 18ರಲ್ಲಿ (ಹುಡುಗಿಯ) ಹಿಂಬಾಲಕ.

## ಬಹುಮಾನಿತ ಪ್ರಶ್ನೆ

ನಾರಾಯಣ ಯಾಜಿ, ಶಿರಾಲಿ

ಕನ್ನಡಕ್ಕಾಗಿ ಕೈ ಎತ್ತಿ ಎತ್ತಿ ಸಾಕಾಯ್ತು. ಮುದುಕನಾದೆ. ಆದರೂ ಗುರುತಿಸುವವರೇ ಇಲ್ಲವಲ್ಲಾ?

ನಿಮ್ಮ ಕೈಯನ್ನೇ ಎತ್ತಿದಿರಿ? ರೌಡಿಗಳಂತೆ ಅವರಿವರದನ್ನು ಎತ್ತಿದ್ದಿದ್ದರೆ ಕೂಡಲೆ ಗುರುತಿಸುತ್ತಿದ್ದರಲ್ಲ!

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ

ಕೆಲವೊಮ್ಮೆ ಪ್ರಶ್ನೆಗಳೇ ಉತ್ತರವಾಗಿ ಪರಿಣಮಿಸಬಹುದೆ?

ಏಕಾಗಬಾರದು?

ಕೊಟ್ಟೂರು ಜವಳಿ ಜಯಣ್ಣ, ದಾವಣಗೆರೆ

ಮಣ್ಣು ಉಳಿಸಿ ಎನ್ನುವುದಕ್ಕೂ, ಹೆಣ್ಣನ್ನು ಉಳಿಸಿ, ಓದಿಸಿ ಎನ್ನುವುದಕ್ಕೂ ಸಾಮ್ಯವೇನು?

ಎರಡೂ ಒಳ್ಳೆಯ ಆರಂಬಕ್ಕೆ ಬುನಾದಿ.

ವಿ. ಹೇಮಂತಕುಮಾರ್, ಬೆಂಗಳೂರು

ಮತವನ್ನಾಗಲಿ, ಮಗಳನ್ನಾಗಲಿ ಯೋಗ್ಯರಿಗೇ ಕೊಡಬೇಕಲ್ಲವೆ?



ಮಗಳದೇನೋ ಸರಿ; ಆದರೆ ಮತವನ್ನು ಯೋಗ್ಯರಿಗೆ ಕೊಡುವ ಪದ್ಧತಿ ನಶಿಸಿದಂತಿದೆ.

ಅನಸೂಯ ಟಿ, ಕೇದಿಗೆಮನೆ

ಹೆಚ್ಚಿನ ಸುಖಿ ಸನ್ಯಾಸಿಯೋ, ಸಂಸಾರಿಯೋ?

ಆಸ್ತಿ ಕೊಟ್ಟಂತರ, ಜವಾಬ್ದಾರಿ ಶೂನ್ಯ ಇರುವ ಮಾಡ್ರನ್ ಸನ್ಯಾಸಿಯೇ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಆರೋಗ್ಯವಂತನಾಗಿರುವ ಮನುಷ್ಯನೂ ವರ್ಷಕ್ಕೊಮ್ಮೆ ಕಾಯಿಲೆ ಬೀಳಬೇಕಂತೆ. ಯಾಕೆ?

ವೈದ್ಯರು, ಔಷಧಿ ವ್ಯಾಪಾರಿಗಳು ಸ್ವಸ್ಥವಾಗಿರಬೇಕಲ್ಲ!

ಮಹಾವೀರ ಕಾಸರ, ಶಿವಮೊಗ್ಗ

ಕಳ್ಳರನ್ನು ಹಿಡಿಯದ ನಾಯಿಗಳನ್ನು ಸಾಕುವುದೇತಕ್ಕೆ?

ತಂದೆತಾಯಿಯರನ್ನು ಸಾಕದ ಮಕ್ಕಳನ್ನೇ ಸಾಕುವಾಗ ಇದೇನು ಮಹಾ!

■ **ರಾಮ್**